# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1316
ಮಾನ್ಯ ಸದಸ್ಯರ ಹೆಸರು : ಶ್ರೀಮತಿ ಡಾ: ಉಮಾಶ್ರೀ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 19-03-2025
ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ತೇರದಾಳ ವಿಧಾನಸಭೆಯ ವ್ಯಾಪ್ತಿಯಲ್ಲಿ ಬರುವ ಕೃಷ್ಣ ನದಿಯ ಮೇಲೆ ರಬಕವಿ-ಮಹಿಷವಾಡಗ ಸೇತುವೆ ಮಂಜೂರಾಗಿದೆಯೇ: ಹಾಗೂ ಯಾವಾಗ ಮಂಜೂರಾಯಿತು: | ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ತೇರದಾಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರಬಕವಿ-ಮಹಿಷವಾಡಗಿ ರಸ್ತೆಯಲ್ಲಿ ಕೃಷ್ಣ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲು ಮಂಜೂರಾಗಿರುತ್ತದೆ. ಸದರಿ ಕಾಮಗಾರಿಗೆ ಸರ್ಕಾರದ ಆದೇಶ ಸಂಖ್ಯೆ: ಲೋಇ 34 ಇಎಪಿ 2014, ದಿನಾಂಕ:31.01.2017 ರಲ್ಲಿ ಮಂಜೂರಾತಿ ನೀಡಲಾಗಿರುತ್ತದೆ. |
| ಆ) | ಪ್ರಾರಂಭದಲ್ಲಿ ಈ ಸೇತುವೆ ನಿರ್ಮಾಣಕ್ಕೆ ಕಾಯ್ದಿರಿಸಿದ ಅನುದಾನವೆಷ್ಟು; ಮಂಜೂರಾದ ಸಂದರ್ಭದಲ್ಲಿ ಮೂಲ ನಕ್ಷೆಯಂತೆ ಕಾಮಗಾರಿ ನಡೆಯುತ್ತಿದೆಯೇ: ಅಥವಾ ನಕ್ಷೆ ಬದಲಾಗಿದೆಯೇ: ಬದಲಾದ ನಕ್ಷೆಯ ಪ್ರಕಾರ ಅನುದಾನ ಮೊತ್ತ ಹೆಚ್ಚಳವಾಗಿದೆಯೇ: | ಸದರಿ ಸೇತುವೆ ನಿರ್ಮಾಣ ಕಾಮಗಾರಿಯ ಮೂಲ ಗುತ್ತಿಗೆ ಮೊತ್ತ ರೂ.30.26 ಕೋಟಿಗಳಾಗಿರುತ್ತದೆ.<br>ಕೃಷ್ಣ ನದಿಗೆ ಅಡ್ಡಲಾಗಿ ಕೈಗೆತ್ತಿಕೊಳ್ಳಲಾಗಿರುವ ಮೇಲ್ಕಂಡ ಸೇತುವೆ ನಿರ್ಮಾಣ ಕಾಮಗಾರಿಯ ಮೂಲ ನಕ್ಷೆಯನ್ನು 2019 ರಲ್ಲಿ ಉಂಟಾದ ಅನಿರೀಕ್ಷಿತ ಭಾರಿ ಪ್ರವಾಹದ ಪರಿಣಾಮವಾಗಿ ನದಿಯಲ್ಲಿ ಹರಿದ ಹೆಚ್ಚಿನ ನೀರಿನ ಮಟ್ಟಕ್ಕೆ ಅನುಗುಣವಾಗಿ ಬದಲಾಯಿಸಲಾಗಿದ್ದು, ಅದರಂತೆ ಪರಿಷ್ಕೃತ ನಕ್ಷೆಯನ್ವಯ 530.170 ಮೀ ರಿಂದ 533.786 ಮೀ ವರೆಗೆ ಏರಿಕೆಯಾದ ನೀರಿನ ಮಟ್ಟಕ್ಕೆ ತಕ್ಕಂತೆ 32.20 ಮೀ ಉದ್ದದ 10 ಅಂಕಣ ಗಳಿಂದ 32.20 ಮೀ ಉದ್ದದ 14 ಅಂಕಣಗಳಿಗೆ ಮರು ವಿನ್ಯಾಸಗೊಳಿಸಲಾಗಿರುತ್ತದೆ. ರಬಕವಿ ಕಡೆಯ ಅಪ್ರೋಚ್ ರಸ್ತೆಯ ಉದ್ದವು 285 ಮೀ ನಿಂದ 400ಮೀ ಗೆ ಹಾಗೂ ಮಹಿಷವಾಡಗಿ ಕಡೆಯ ಅಪ್ರೋಚ್ ರಸ್ತೆಯ ಉದ್ದವು 254ಮೀ ನಿಂದ 342 ಮೀ ಹೆಚ್ಚಳವಾಗಿರುತ್ತದೆ.<br>ಬದಲಾದ ನಕ್ಷೆಯಂತೆ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಅದರಂತೆ ಕಾಮಗಾರಿಯ ಪರಿಷ್ಕೃತ ಮೊತ್ತವು ರೂ.40.36 ಕೋಟಿ ಎಂದು ಅಂದಾಜಿಸಲಾಗಿದೆ. |
| ಇ) | ಈ ಸೇತುವೆಯ ಟೆಂಡರ್ ಪ್ರಕ್ರಿಯೆ ಮುಗಿದು ಕಾಮಗಾರಿ ಕಾರ್ಯಾರಂಭವಾಗಿದೆಯೇ: ಹಾಗಿದ್ದಲ್ಲಿ, ಯಾವಾಗ ಆರಂಭವಾಯಿತು: ಹಾಗೂ ಸದರಿ ಕಾಮಗಾರಿ ಪೂರ್ಣಗೊಳಿಸಲು ಟೆಂಡರ್‌ದಾರರಿಗೆ ನೀಡಿದ್ದ ಕಾಲಾವಧಿ ಎಷ್ಟು? | ಸೇತುವೆ ನಿರ್ಮಾಣ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಮುಗಿದು, ದಿನಾಂಕ:19.03.2018 ರಂದು ಕಾಮಗಾರಿ ಪ್ರಾರಂಭಸಲಾಗಿರುತ್ತದೆ. ಮೂಲ ಕರಾರಿನಂತೆ ಕಾಮಗಾರಿಯನ್ನು ಪೂರ್ಣಗೊಳಿಸಲು ಟೆಂಡರ್‌ದಾರರಿಗೆ 30 ತಿಂಗಳ ಕಾಲಾವಧಿ ನಿಗದಿಪಡಿಸಲಾಗಿರುತ್ತದೆ.<br>ಕೋವಿಡ್ ಸಾಂಕ್ರಾಮಿಕ ರೋಗ, ಭೂಸ್ವಾಧೀನ ವಿಳಂಬ ಹಾಗೂ 2019 ರಲ್ಲಿ ಉಂಟಾದ ಅನಿರೀಕ್ಷಿತ ಭಾರಿ ಪ್ರವಾಹದ ಪರಿಣಾಮದಿಂದಾಗಿ ವಿನ್ಯಾಸ ಬದಲಾಗಿರುವುದರಿಂದ ಕಾಮಗಾರಿ ವಿಳಂಬವಾಗಿರುತ್ತದೆ.. |

ಸಂಖ್ಯೆ. ಲೋಇ 105 ಇಎಪಿ 2025

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು